# ನಗರಸಭಾ ಕಾರ್ಯಾಲಯ, ತುಮಕೂರು.

ಫ್ಯಾಕ್ಸ್ : 2275106, ದೂರವಾಣಿ ಸಂಖ್ಯೆ.
ಪೌರಾಯುಕ್ತರ ಕೊಠಡಿ: 2278480,
ಸಾರ್ವಜನಿಕ ದೂರು ವಿಭಾಗ: 2272200,
ವೆಬ್‌ಸೈಟ್: www.tumkurcity.gov.in

ಸಂಖ್ಯೆ:ನಸತು/ಕಂಶಾ(4)/ಹರಾಜ್85/2008–09 ದಿನಾಂಕ: 05.05.2009.

## :: ಬಹಿರಂಗ ಹರಾಜು ಇಸ್ತಿಹಾರ್ ::

ಈ ಮೂಲಕ ಸಮಸ್ತ ನಾಗರೀಕರಿಗೆ ತಿಳಿಯಪಡಿಸುವುದೇನೆಂದರೆ, ತುಮಕೂರು ನಗರಸಭೆಗೆ ಈ ಕೆಳಕಂಡ ವಿವಿಧ ಬಾಬುಗಳನ್ನು ದಿನಾಂಕ: 01–06–2009 ರಿಂದ 31–03–2010 ರವರೆಗೆ ರೂಢಿಸಿಕೊಳ್ಳುವ ಹಕ್ಕನ್ನು ದಿನಾಂಕ:25.05.2009 ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ ನಗರಸಭಾ ಸಭಾಂಗಣ (ಶ್ರೀ ಕೃಷ್ಣರಾಜೇಂದ್ರ ಪುರಭವನ)ದಲ್ಲಿ ಪೌರಾಯುಕ್ತರು ಅಥವಾ ಅವರಿಂದ ಅಧಿಕಾರ ಪಡೆದಿರುವವರಿಂದ ಹರಾಜು ಮಾಡಲಾಗುತ್ತದೆ. ಆಸಕ್ತಿ ಉಳ್ಳವರು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಹರಾಜಿನಲ್ಲಿ ಭಾಗವಹಿಸಿ ಬಾಬುಗಳನ್ನು ಪಡೆಯಬಹುದು.

| ಕ್ರ. ಸಂ. | ಬಾಬುಗಳು | ಟೆಂಡರ್ ಠೇವಣಿ |
|---|---|---|
| 1 | ಶ್ರೀ ಸಿದ್ಧಿ ವಿನಾಯಕ ಮಾರುಕಟ್ಟೆ ಮುಂಭಾಗ ಸೈಕಲ್ ಸ್ಟಾಂಡ್ ಫೀ ವಸೂಲಿ ರೂಢಿಸಿಕೊಳ್ಳುವ ಹಕ್ಕು ಸೈಕಲ್ ಒಂದಕ್ಕೆ ರೂ. 1/– ದ್ವಿಚಕ್ರ ವಾಹನ 1ಕ್ಕೆ 2/– | 50,000.00 |
| 2 | ತುಮಕೂರು ನಗರ ಖಾಸಗಿ ಬಸ್‌ಗಳ ನಿಲ್ದಾಣ ನಿಲುವಳಿ ಶುಲ್ಕ ವಸೂಲಿ ಹಕ್ಕು ಬಸ್ ಒಂದಕ್ಕೆ 5/– ರೂ. (ಬಸ್ ನಿಲ್ದಾಣ ನವೀಕರಣವಿರುವುದರಿಂದ ಸ್ಥಳ ಬದಲಾವಣೆ ಷರತ್ತಿಗೆ ಒಳಪಟ್ಟಿರುತ್ತೆ) | 50,000.00 |
| 3 | ನಗರದ ಕ್ಯಾತ್ಸಂದ್ರದಲ್ಲಿ ಪ್ರತಿ ಮಂಗಳವಾರ ನಡೆಯುವ ಸಂತೆ ಸುಂಕ ವಸೂಲಿ ಹಕ್ಕು ಕುರಿ,ಮೇಕೆಗಳಿಗೆ 1/– ರೂ. ತರಕಾರಿ ಅಂಗಡಿಗಳಿಗೆ 3/– ರೂ. ಚಿಕ್ಕ ಅಂಗಡಿಗಳಿಗೆ 5/– ರೂ. ದಿನಸಿ ಅಂಗಡಿಗಳಿಗೆ 7/– ರೂ.ನಂತೆ. | 25,000.00 |
| 4 | ಕಸಾಯಿಖಾನೆಯಲ್ಲಿ ಸುಂಕ ವಸೂಲಿ ಮಾಡುವ ಹಕ್ಕು ಕುರಿ, ಮೇಕೆ ತಲಾ ಒಂದಕ್ಕೆ 1/– ರೂ.ನಂತೆ | 500.00 |

### ಷರತ್ತುಗಳು:

1. ಹರಾಜಿನಲ್ಲಿ ಭಾಗವಹಿಸುವವರು ಪ್ರಾಪ್ತ ವಯಸ್ಕರಾಗಿರಬೇಕು.
2. ನಗರಸಭೆಗೆ ಯಾವುದೇ ತರಹದ ಬಾಕಿದಾರರಾಗಿದ್ದಲ್ಲಿ ಹರಾಜಿನಲ್ಲಿ ಭಾಗವಹಿಸಿಸಲು ಅವಕಾಶವಿರುವುದಿಲ್ಲ.
3. ಹರಾಜಿನಲ್ಲಿ ಭಾಗವಹಿಸುವವರು ಹರಾಜು ಪ್ರಾರಂಭವಾಗುವ ಮುನ್ನ ಆಯಾಯ ಬಾಬುಗಳಿಗೆ ನಿಗಧಿಪಡಿಸಿದ ಠೇವಣಿಯನ್ನು ನಗದು ಪಾವತಿಸಿ ಅಥವಾ ಡಿ.ಡಿ. ಮುಖಾಂತರ ಪೌರಾಯುಕ್ತರು, ನಗರಸಭೆ, ತುಮಕೂರು ಇವರ ಹೆಸರಿನಲ್ಲಿ ಪಡೆದ ಠೇವಣಿಯನ್ನು ಸಲ್ಲಿಸಿ ಖುದ್ದಾಗಿ ಬಿಡ್ ಸವಾಲು ಮೂಲಕ ಹರಾಜಿನಲ್ಲಿ ಭಾಗವಹಿಸಿ ಹಕ್ಕನ್ನು ಪಡೆದುಕೊಳ್ಳಬೇಕು ಮತ್ತು ಹರಾಜನ್ನು ಬಿಡ್ ಮಾಡುವಾಗ ರೂ.100/– ದರದಲ್ಲಿ ಹೆಚ್ಚು ಬಿಡ್ ಮಾಡಬೇಕು.
4. ಯಶಸ್ವಿ ಬಿಡ್‌ದಾರನ ಠೇವಣಿಯನ್ನು ಬಿಟ್ಟು ಉಳಿದ ಬಿಡ್‌ದಾರರಿಗೆ ಠೇವಣಿಯನ್ನು ಹರಾಜು ಮುಗಿದ ಕೂಡಲೇ ವಾಪಸ್ಸು ಕೊಡಲಾಗುವುದು.
5. ಹರಾಜು ಸಮಯದಲ್ಲಿ ಯಾವುದೇ ಕಾರಣವನ್ನು ಕೊಡದೇ ಹರಾಜನ್ನು ತಿರಸ್ಕರಿಸುವ, ಹಾಗೂ ಯಾವುದೇ ಸಂದರ್ಭದಲ್ಲಿ ಯಾವುದೇ ರೀತಿಯ ಷರತ್ತುಗಳನ್ನು ಹೊಸದಾಗಿ ವಿಧಿಸುವ ಅಧಿಕಾರವನ್ನು ಹರಾಜು ಮಾಡುವ ಅಧಿಕಾರಿಗೆ ಇರುವುದು ಈ ರೀತಿಯಾಗಿ ವಿಧಿಸುವ ಷರತ್ತುಗಳಿಗೆ ಬದ್ಧವಾಗಿರತಕ್ಕದ್ದು.
6. ಯಶಸ್ವಿ ಬಿಡ್‌ದಾರನು ಹರಾಜು ಮುಗಿದ ನಂತರ ಅಖೈರು ಬಿಡ್‌ನ ಮೊಬಲಗಿನ ಶೇ.50ರಷ್ಟು ಮೊತ್ತವನ್ನು ಸ್ಥಳದಲ್ಲಿಯೇ ಪಾವತಿಸುವುದು. ತಪ್ಪಿದಲ್ಲಿ ಆ ದಿನವೇ ಮರುಹರಾಜನ್ನು ನಡೆಸಲಾಗುವುದು. ಉಳಿದ ಶೇ.50ರಷ್ಟು ಮೊತ್ತವನ್ನು 7 ದಿವಸದೊಳಗಾಗಿ ನಗರಸಭೆಗೆ ಪಾವತಿಸುವುದು. ತಪ್ಪಿದಲ್ಲಿ ಮರುಹರಾಜು ಮಾಡಲಾಗುವುದು ಮತ್ತು ಮೊದಲನೇ ಬಿಡ್‌ದಾರನ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮರು ಹರಾಜಿನಿಂದ ನಗರಸಭೆಗೆ ನಷ್ಟವುಂಟಾದಲ್ಲಿ ಆ ನಷ್ಟವನ್ನು ಮೊದಲನೇ ಬಿಡ್‌ದಾರರಿಂದ ಕಂದಾಯ ರೂಪದಲ್ಲಿ ವಸೂಲಿ ಮಾಡಲಾಗುವುದು. ಒಂದು ವೇಳೆ ನಗರಸಭೆಗೆ ಲಾಭ ಬಂದಲ್ಲಿ ಲಾಭಾಂಷದಲ್ಲಿ ಮೊದಲನೇ ಬಿಡ್‌ದಾರರಿಗೆ ಯಾವುದೇ ಹಕ್ಕು ಇರುವುದಿಲ್ಲ.
7. ಯಶಸ್ವಿ ಬಿಡ್‌ದಾರರು ದಿನಾಂಕ: 01.06.2009 ರಿಂದ 31.03.2010 ರವರೆಗೆ ಹರಾಜು ನಿಬಂಧನೆಗಳ ರೀತ್ಯಾ ವಸೂಲು ಮಾಡುವ ಪ್ರತಿ ಟಿಕೆಟ್/ರಸೀತಿಗಳನ್ನು ನಗರಸಭೆಯ ಮೊಹರು ಹಾಕಿಸಿಕೊಂಡು ನಂತರ ವಸೂಲು ಮಾಡುವುದು.
8. ಮೇಲ್ಕಂಡ ಯಾವುದೇ ಷರತ್ತನ್ನು ಉಲ್ಲಂಘನೆ ಮಾಡಿದಲ್ಲಿ ಯಾವುದೇ ಕಾರಣವನ್ನು ನೀಡದೇ ಅಖೈರು ಬಿಡ್‌ದಾರರು ಪಾವತಿ ಮಾಡಿರುವ ಮೊಬಲನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
9. ನಗರಸಭೆಯ ಅಧಿಕಾರಿಗಳಿಗೆ ಬಾಬ್ತುಗಳ ಶುಲ್ಕ ವಸೂಲಾತಿಯ ಬಗ್ಗೆ ಪರಿಶೀಲಿಸುವ ಹಕ್ಕು ಇರುತ್ತದೆ.
10. ಹೆಚ್ಚಿನ ವಿಷಯಗಳಿಗೆ ಕಚೇರಿಯ ವೇಳೆಯಲ್ಲಿ ಕಂದಾಯಾಧಿಕಾರಿ/ವ್ಯವಸ್ಥಾಪಕರನ್ನು ಸಂಪರ್ಕಿಸಿ ಅಥವಾ ವೆಬ್‌ಸೈಟ್ www.tumkurcity.gov.in ಮಾಹಿತಿಯನ್ನು ಪಡೆಯಬಹುದಾಗಿದೆ.
11. ಹರಾಜನ್ನು ಅಂಗೀಕರಿಸುವ/ತಿರಸ್ಕರಿಸುವ ಮರುಹರಾಜು ಮಾಡುವ ವಿಶಿಷ್ಠ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.

| | | | |
|---|---|---|---|
| ಸಹಿ/– | ಸಹಿ/– | ಸಹಿ/– | ಸಹಿ/– |
| ಬಿ.ಎಸ್.ರವೀಶ್, | ಹನುಮಂತರಾಯಪ್ಪ, | ಟಿ.ಹೆಚ್.ವಾಸುದೇವ್, | ಎನ್.ಆರ್.ಆದರ್ಶಕುಮಾರ್, |
| ಅಧ್ಯಕ್ಷರು, | ಉಪಾಧ್ಯಕ್ಷರು, | ಅಧ್ಯಕ್ಷರು ಸ್ಥಾಯಿ ಸಮಿತಿ, | ಪೌರಾಯುಕ್ತರು, |
| ನಗರಸಭೆ, ತುಮಕೂರು. | ನಗರಸಭೆ, ತುಮಕೂರು. | ನಗರಸಭೆ, ತುಮಕೂರು. | ನಗರಸಭೆ, ತುಮಕೂರು. |